C.R.P.67

Form No.4 (Civil)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No. 118/2019 ಸಿ. ಡಬ್ಲ್ಯೂ- 3 ಪಿ. ಡಬ್ಲ್ಯೂ -3

ದಿನಾಂಕ : 07.10.2023 ರಂದು ಪ್ರಮಾಣ ವಚನ ಬೋಧಿಸಲಾಗಿದೆ

| | |
|---|---|
| ಸಾಕ್ಷಿದಾರರ ಹೆಸರು | ಶಿವು |
| ತಂದೆಯ ಹೆಸರು | ನಿಂಗಯ್ಯ |
| ವಯಸ್ಸು | 29 ವರ್ಷ |
| ಉದ್ಯೋಗ | ಏನೂ ಇಲ್ಲ |
| ವಾಸ | ಬೆಂಗಳೂರು |

ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :

1. ಮೊದಲು ನಾನು ಎಳನೀರು ವ್ಯಾಪಾರ ಮಾಡುತ್ತಿದ್ದೆ ಹಾಗೂ ಎಲ್ ಐ ಸಿ ಏಜೆಂಟ್ ಆಗಿದ್ದೆ. 2017 ರಲ್ಲಿ ನನಗೆ ರಸ್ತೆ ಅಪಘಾತವಾದಾಗಿನಿಂದ ನಾನು ಯಾವುದೇ ಉದ್ಯೋಗ ಮಾಡುತ್ತಿಲ್ಲ. ನನ್ನ ಸ್ವಂತ ಊರು ತೊಪ್ಪನಹಳ್ಳಿ ಗ್ರಾಮ. ಫಿರ್ಯಾದಿ ಮುತ್ತುರಾಜು ನನ್ನ ದೊಡ್ಡಪ್ಪನ ಮಗ. ಚಾಸಾ-2 ಹೇಮಂತ್ ಕುಮಾರ್ ನನ್ನ ತಮ್ಮ. ಚಾಸಾ-4 ರಿಂದ 9 ನಮ್ಮ ಊರಿನವರು. ಚಾಸಾ-10 ರಿಂದ 14 ನನ್ನ ಸಂಬಂಧಿಕರು. ನಮ್ಮ ಊರಿನವರಾದ ಆರೋಪಿಗಳ ಪರಿಚಯ ನನಗೆ ಇದೆ.

2. ನಾನು ಕಳೆದ 10 ವರುಷಗಳಿಂದ ಬೆಂಗಳೂರಿನಲ್ಲಿ ವಾಸವಿದ್ದೇನೆ. ನಾನು ಮೊದಲು ಫಿರ್ಯಾದಿಯೊಂದಿಗೆ ಎಳನೀರು ವ್ಯಾಪಾರ ಮಾಡುತ್ತಿದ್ದೆ ಹಾಗೂ ಜನರಲ್ ಇನ್ಶೂರೆನ್ಸ್ ಏಜೆಂಟ್ ಆಗಿದ್ದೆ. ದಿ:25.12.2016 ರಂದು ನಾನು ಮತ್ತು ಫಿರ್ಯಾದಿ ಬೆಂಗಳೂರಿನ ರಾಮಯ್ಯ ಆಸ್ಪತ್ರೆಯ ಬಳಿ ಎಳನೀರನ್ನು ವಾಹನದಿಂದ ಇಳಿಸುತ್ತಿದ್ದೆವು. ಬೆಳಗ್ಗೆ 8.30 ರಿಂದ 9.00 ಗಂಟೆ ಹೊತ್ತಿಗೆ ನನ್ನ ತಮ್ಮ ಹೇಮಂತ್ ಕುಮಾರ್ ಫಿರ್ಯಾದಿಗೆ ಫೋನ್ ಮಾಡಿ ಫಿರ್ಯಾದಿ ತಮ್ಮನಾದ ಪ್ರಸನ್ನನಿಗೆ ಕುಂಟರಾಜ ಹಾಗೂ ಅವರ ಮನೆಯವರು ಹೊಡೆದಿರುವುದರಿಂದ ಆತನನ್ನು ಮದ್ದೂರು ಆಸ್ಪತ್ರೆಗೆ ಸೇರಿಸಿದ್ದೇವೆ ಎಂದು ಹೇಳಿದನು. ಆಗ ನಾನು ಮತ್ತು ಫಿರ್ಯಾದಿ ವಾಹನದಿಂದ ಎಳನೀರನ್ನು ಇಳಿಸಿ ಬೆಳಿಗ್ಗೆ 10.00 ಗಂಟೆಗೆ ಬೆಂಗಳೂರಿನಿಂದ ಹೊರಟು ತೊಪ್ಪನಹಳ್ಳಿಯ ನಮ್ಮ ತೋಟದ ಮನೆಗೆ ಬಂದೆವು. ತೋಟದ ಮನೆಯಲ್ಲಿ ಯಾರೂ ಇರಲಿಲ್ಲವಾದ್ದರಿಂದ ನಮ್ಮ ಚಿಕ್ಕಪ್ಪ ಶಿವರಾಮು ರವರಿಗೆ ಫೋನ್ ಮಾಡಿದಾಗ ಆರೋಪಿಯ ಕಡೆಯವರು ಪುಟ್ಟಲಿಂಗಮ್ಮ ರವರನ್ನು ಕರೆದುಕೊಂಡು ಸುಳ್ಳು ದೂರು ಕೊಡಲು ಮದ್ದೂರು ಪೊಲೀಸ್ ಠಾಣೆಗೆ ಬಂದಿದ್ದಾರೆ ಎಂದು ಹೇಳಿದರು. ಆಗ ನಾನು ಮತ್ತು ಫಿರ್ಯಾದಿ ಮದ್ದೂರು ಪೊಲೀಸ್ ಠಾಣೆಗೆ

ಹೋದೆವು. ಸದರಿ ಪೊಲೀಸ್ ಠಾಣೆಯ ಬಳಿ ಆರೋಪಿಗಳು ಇದ್ದರು ಹಾಗೂ ನಮ್ಮ ಕಡೆಯವರಾದ ಹೇಮಂತ್, ಶಿವರಾಜು, ಸ್ವಾಮಿ, ಯೋಗ ಇದ್ದರು. ಆಗ ನಾವು ನಮ್ಮ ಅಣ್ಣ ಪ್ರಸನ್ನನಿಗೆ ಕುಂಟರಾಜನ ಕಡೆಯವರು ಹೊಡೆದ ಬಗ್ಗೆ ಪೊಲೀಸರಿಗೆ ದೂರು ಕೊಟ್ಟು ಸ್ವಿಕೃತಿ ಪತ್ರ ಪಡೆದುಕೊಂಡೆವು.

3. ಫಿರ್ಯಾದಿ ತೊಪ್ಪನಹಳ್ಳಿ ಗ್ರಾಮಕ್ಕೆ ಹೊರಟನು. ನಾನು ಹೇಮಂತ್, ಸ್ವಾಮಿ, ಶಿವರಾಜು, ಯೋಗರಾಜು ಇವರುಗಳು ಮದ್ದೂರಿನಲ್ಲಿ ಕ್ರಿಸ್ ಮಸ್ ಹಬ್ಬದ ಊಟಕ್ಕೆ ಹೋದೆವು. ಊಟ ಮುಗಿಸಿಕೊಂಡು ನಾವು ತೊಪ್ಪನಹಳ್ಳಿಯ ತೋಟದ ಮನೆಗೆ ಹೋದೆವು. ಆಗ ತೋಟದ ಮನೆಯಲ್ಲಿ ನನ್ನ ದೊಡ್ಡಪ್ಪ ಶಿವಣ್ಣ, ಚಿಕ್ಕಪ್ಪ ಶಿವರಾಮು ಇದ್ದರು. ಸಂಜೆ 5.15 ರಿಂದ 5.30 ರ ಹೊತ್ತಿಗೆ ಫಿರ್ಯಾದಿ ಹಾಗೂ ಚಾಸಾ-2 ಊರಿನ ಒಳಗೆ ಏನೋ ಕೆಲಸ ಇದೆ ಎಂದು ಮೋಟಾರು ಬೈಕಿನಲ್ಲಿ ಊರ ಒಳಗೆ ಹೋದರು. ಚಾಸಾ-1 ಮತ್ತು 2 ಹೋಗಿ ಹಿಂದಿರುಗಿ ಸ್ವಲ್ಪ ಹೊತ್ತಾದರೂ ಬರಲಿಲ್ಲ ಎಂದು ಚಾಸಾ-4 ಸ್ವಾಮಿ ಹಾಗೂ ಚಾಸಾ-5 ಶಿವರಾಜು ಇವರುಗಳು ಚಾಸಾ-1 ಮತ್ತು 2 ರವರನ್ನು ನೋಡಿಕೊಂಡು ಬರಲು ಹೋದರು.

4. ಸ್ವಲ್ಪ ಹೊತ್ತಿನ ನಂತರ ನಮ್ಮ ಊರಿನ ಕಡೆಯಿಂದ ಕೂಗಾಡುವ ಹಾಗೂ ಗಲಾಟೆಯ ಶಬ್ದ ಕೇಳಿ ಬಂದಿತು. ಆಗ ನಾನು ಮತ್ತು ಯೋಗರಾಜು ನಡೆದುಕೊಂಡು ನಮ್ಮ ಊರಿನಲ್ಲಿರುವ ಅರಳಿ ಮರದ ಬಳಿಗೆ ಹೋದೆವು. ಸದರಿ ಸ್ದಳದಲ್ಲಿ ಆರೋಪಿಗಳು ಇದ್ದರು. ಅದೇ ಸಮಯದಲ್ಲಿ ಫಿರ್ಯಾದಿ, ಚಾಸಾ-2 ಹೇಮಂತ್ ಕುಮಾರ್, ಸ್ವಾಮಿ, ಶಿವರಾಜು ಸಹ ಇದ್ದರು. ನಾವು ಫಿರ್ಯಾದಿ ಹಾಗೂ ನನ್ನ ಅಣ್ಣನ ಜೊತೆ ಹೋಗಿ ನಿಂತುಕೊಂಡೆವು. ಆಗ ಆರೋಪಿ-1 ನಮ್ಮನ್ನು ಕುರಿತು ನೀವು ದೂರು ಕೊಟ್ಟು ಏನು ಕಿತ್ತುಕೊಂಡಿರಿ ಎಂದು ಹಾಗೂ ಅವಾಚ್ಯ ಶಬ್ದಗಳಿಂದ ನಮ್ಮನ್ನು ಬೈದರು. ಆಗ ನನ್ನ ಅಣ್ಣ ಶಿವರಾಜು 1 ನೇ ಆರೋಪಿಯನ್ನು ಏಕೆ ಈ ರೀತಿ ಬೈಯುತ್ತಿದ್ದೀಯಾ ಎಂದು ಕೇಳಿದರು. ಆಗ 1 ನೇ ಆರೋಪಿ ತನ್ನ ಕೈಯಲ್ಲಿ ಹಿಡಿದಿದ್ದ ಮಚ್ಚನ್ನು ನಮ್ಮ ಕಡೆ ತೋರಿಸಿ ನೀನು ನನ್ನ ಸ್ನೇಹಿತ ಎಂದು ಹೇಳುತ್ತಿದ್ದೇನೆ, ಎಲ್ಲರನ್ನೂ ಕರೆದುಕೊಂಡು ಹೋಗು ಇಲ್ಲ ಅಂದರೆ ಎಲ್ಲರನ್ನು ಕತ್ತರಿಸಿ ಹಾಕುತ್ತೇನೆ ಎಂದು ಬೆದರಿಕೆ ಹಾಕಿದನು. ಆರೋಪಿ ಮಹೇಂದ್ರ ಏನೋ ಚಿಕ್ಕಹುಡುಗನಾದ ಮುತ್ತುರಾಜುವಿನ ಮೇಲೆ ಗಲಾಟೆಗೆ ಹೋಗಿದ್ದೀರಾ, ದಮ್ಮ ಇದ್ದರೆ ನಮ್ಮ ಮೇಲೆ ತೋರಿಸಿ ಎಂದು ಬೈದನು. ಆಗ ನನ್ನ ಅಣ್ಣ ಯೋಗರಾಜುನು ಮಹೇಂದ್ರನನ್ನು ಕುರಿತು ಮತ್ತುರಾಜುವಿಗೆ ಹೊಡದ ವಿಚಾರವನ್ನು ನೀವು ಏಕೆ ಕೇಳುತ್ತೀರಾ, ಅವರ ಮನೆಯವರು ಇಲ್ಲವಾ ಎಂದು ಕೇಳಿದನು. ಆಗ ಮಹೇಂದ್ರನು ಸದರಿ ಮುತ್ತುರಾಜು ನನ್ನ ಸ್ನೇಹಿತನ ಅಣ್ಣನ ಮಗ, ಅದಕ್ಕೆ ಕೇಳಲು ಬಂದಿದೇವೆ ಎಂದು ಹೇಳಿದನು. ಆಗ ಯೋಗರಾಜು ನೀವು ನಿಮ್ಮ ಸ್ನೇಹಿತನ ಅಣ್ಣನ ಮಗನಿಗೆ ಹೊಡೆದ ಬಗ್ಗೆ ಕೇಳಲು ಬಂದ್ದಿದ್ದೀರಾ ನಾವು ನನ್ನ ಅಣ್ಣನಿಗೆ ಹೊಡೆದ ಬಗ್ಗೆ ಕೇಳಲು ಬರಬಾರದಾ ಎಂದು ಕೇಳಿದನು. ಆಗ ಫಿರ್ಯಾದಿಯು ಮಹೇಂದ್ರನನ್ನು

ಕುರಿತು ಆ ಚಿಕ್ಕ ಹುಡುಗನೇ ನನ್ನ ತಮ್ಮನಿಗೆ ಹೊಡೆದಿದ್ದು, ಅವನ ತಲೆಗೆ ಹೊಲಿಗೆ ಹಾಕಿದ್ದಾರೆ, ಆಗೆಲ್ಲಾ ನೀವು ಎಲ್ಲಿಗೆ ಹೋಗಿದ್ದೀರಿ, ಈಗ ನಮ್ಮ ಮೇಲೆ ಗಲಾಟೆಗೆ ಬಂದಿದ್ದೀರಾ ಎಂದು ಕೇಳಿದನು.

5. ಫಿರ್ಯಾದಿ ಊರಿನ ಮುಖಂಡರಾದ ಕೆಂಗಲ್ ಗೌಡ ಹಾಗೂ ಮಹೇಂದ್ರ ರವರಿಗೆ ನೀವು ಊರ ಮುಖಂಡರು, 4 ಜನಕ್ಕೆ ಬುದ್ದಿವಾದ ಹೇಳಬೇಕಾದವರು, ನೀವೇ ಪುಟ್ಟಲಿಂಗಮ್ಮನನ್ನು ಕರೆದುಕೊಂಡು ಹೋಗಿ ಪುಸಲಾಯಿಸಿ ಸುಳ್ಳು ದೂರು ಕೊಡಿಸಿದ್ದೀರಾ, ನೀವೇ ರಾಜಿ ಪಂಚಾಯತಿ ಮಾಡಿಸಬಹುದಿತ್ತು ಅಂತಹದರಲ್ಲಿ ಯಾಕೆ ಈ ರೀತಿ ಮಾಡಿದಿರಿ ಎಂದು ಕೇಳಿದನು. ಆಗ ಆರೋಪಿ ಮಹೇಂದ್ರ ನನಗೆ ಬುದ್ದಿವಾದ ಹೇಳಲು ಬರುತ್ತೀಯಾ, ಇನ್ನು ಒಂದು ಸಲಿ ಊರ ಒಳಗೆ ನೀನು ಬರಬಾರದು, ಆ ರೀತಿ ಮಾಡಿಬಿಡುತ್ತೇನೆ ಎಂದು ಬೆದರಿಕೆ ಹಾಕಿದನು.

6. ಅದೇ ಸಮಯದಲ್ಲಿ ಆರೋಪಿ ಮಹೇಂದ್ರ ಇವರು ಬಾಯಿ ಮಾತಿಗೆ ಬಗ್ಗುವುದಿಲ್ಲ ಎತ್ತಿಕೊಳ್ಳಿರೋ ದೊಣ್ಣೆಗಳನ್ನು ಎಂದು ಹೇಳಿದಾಗ ಆರೋಪಿ ಮತ್ತುರಾಜು ಅಲಿಯಾಸ್ ಶೆಡ್ಡು ಓಡಿ ಹೋಗಿ ಅಲ್ಲಿ ನಿಂತಿದ್ದ ಬುಲೇರೋ ವಾಹನದಿದ ದೊಣ್ಣೆಗಳನ್ನು ತೆಗೆದುಕೊಂಡು ಬಂದನು. ಆಗ ಆರೋಪಿಗಳೆಲ್ಲರೂ ಒಂದೊಂದು ದೊಣ್ಣೆಗಳನ್ನು ತೆಗೆದುಕೊಂಡು ನಮ್ಮ ಕಡೆಗೆ ಬಂದರು. ಆರೋಪಿ ಚನ್ನೇಗೌಡ ಫಿರ್ಯಾದಿಯ ಕತ್ತಿನ ಪಟ್ಟಿ ಹಿಡಿದುಕೊಂಡು ಸೂಳೆ ಮಗನೇ ನಿಮ್ಮನ್ನು ಸುಮ್ಮನೇ ಬಿಡುತ್ತೀವಾ ಏನೂ ಮಾಡುತ್ತೀವಿ ನೋಡಿ ಎಂದು ಹೇಳುತ್ತಾ ಮಚ್ಚಿನಿಂದ ಫಿರ್ಯಾದಿಯ ತಲೆಗೆ ಹೊಡೆಯಲು ಹೋದನು, ಆಗ ಚಾಸಾ-2 ಫಿರ್ಯಾದಿಯನ್ನು ಹಿಡಿದುಕೊಂಡು ಎಳೆದಿದ್ದರಿಂದ ಆ ಏಟು ಫಿರ್ಯಾದಿಯ ಹಣೆಗೆ ಬಿದ್ದು ರಕ್ತಗಾಯವಾಯಿತು. ಅದೇ ಸಮಯಕ್ಕೆ ಆರೋಪಿ ಮಹೇಂದ್ರ ಚೂರಿ ತೆಗೆದುಕೊಂಡು ಫಿರ್ಯಾದಿಯ ಹೊಟ್ಟೆಗೆ ತಿವಿದನು. ಆದರೆ ಆ ಏನು ಫಿರ್ಯಾದಿಯನ್ನು ಹಿರಿದುಕೊಂಡಿದ್ದ ಚಾಸಾ-2 ರವರ ಎಡಗೈ ಗೆ ಬಿದ್ದು ರಕ್ತಗಾಯವಾಯಿತು.

7. ಆಗ ಆರೋಪಿ ಮಹೇಂದ್ರ ಇವರನ್ನೆಲಾ ಬಿಡುವುದು ಬೇಡೆ ಹೊಡೆದು ಸಾಯಿಸಿಬಿಡೋಣ ಎಂದು ಹೇಳಿದನು. ಆಗ ಆರೋಪಿ ಮತ್ತುರಾಜು ಅಲಿಯಾಸ್ ಶೆಡ್ಡು ಕಬ್ಬಿಣದ ರಾಡಿನಿಂದ ನನ್ನ ಬೆನ್ನಿನ ಮೇಲೆ ಕುತ್ತಿಗೆ ಹಾಗೂ ಸೊಂಟದ ಬಳಿ ಹೊಡೆದನು. ಅದರಿಂದ ನನಗೆ ತುಂಬಾ ಏಟಾಯಿತು. ಮುತ್ತುರಾಜು , ಹೇಮಂತ ರವರಿಗೆ ಆದ ಗಾಯಗಳಿಂದ ಹೆಚ್ಚು ರಕ್ತಸ್ರಾವವಾಗುತ್ತಿತ್ತು. ಅವರುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗೋಣ ಎಂದು ನಾನು ಬೈಕನ್ನು ತೆಗೆದುಕ್ಕೊಳಲು ಹೋದೆ. ಹೇಮಂತನು ಮುತ್ತುರಾಜುವನು ಕರೆದುಕೊಂಡು ನನ್ನ ಬೈಕಿನಲ್ಲಿ ಕೂರಿಸಿಕೊಳ್ಳಲು ಹೊದಾಗ ಆರೋಪಿ ಮುತ್ತುರಾಜು ಅಲಿಯಾಸ್ ಶೆಡ್ಡು ಫಿರ್ಯಾದಿಯ ತಲೆಗೆ ಕಬ್ಬಿಣದ ರಾಡಿನಿಂದ ಹೊಡೆದನು. ಆಗ ಹೇಮಂತ ಕುಮಾರ ಮುತ್ತುರಾಜು ಅಲಿಯಾಸ್ ಶೆಡ್ಡುವನ್ನು ತಳ್ಳಿ ಫಿರ್ಯಾದಿಯನ್ನು ನಾನು ತೆಗೆದುಕೊಂಡ ಬಂದ ದ್ವಿಚಕ್ರ

ವಾಹನದ ಮೇಲೆ ಕೂರಿಸಿಕೊಂಡನು. ನಾನು, ಮುತ್ತುರಾಜು ಹಾಗೂ ಹೇಮಂತ ಬೈಕಿನಲ್ಲಿ ಮದ್ದೂರಿನ ಆಸ್ಪತ್ರೆಗೆ ಹೋಗೋಣ ಎಂದು ಹೊರಟೆವು. ಆಗ ಫಿರ್ಯಾದಿ ಮೊದಲು ನಾವು ಪೊಲೀಸ್ ಠಾಣೆಗೆ ಹೋಗಿ ದೂರು ಕೊಡೋಣ ಹಾಗೂ ನಂತರ ಚಿಕಿತ್ಸೆ ಪಡಯೋಣ ಎಂದು ಹೇಳಿದನು. ಆದುದರಿಂದ ನಾವು ಮದ್ದೂರಿನ ಪೊಲೀಸ್ ಠಾಣೆಯ ಬಳಿ ಹೋದೆವು. ಠಾಣೆಯ ಹೊರಗೆ ಇದ್ದ ಒಂದಿಬ್ಬರು ಪೊಲೀಸರು ನಮ್ಮನ್ನು ನೋಡಿ ನೀವು ಮೊದಲು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ತೆಗೆದುಕೊಳ್ಳಿ ನಾವು ಅಲ್ಲಿಗೆ ಬರುತ್ತೇವೆ ಎಂದು ಹೇಳಿದರು. ಆದುದರಿಂದ ನಾವು ಮೊದಲು ಆಸ್ಪತ್ರೆಗೆ ಹೋದೆವು. ಚಾಸಾ-1 ಮತ್ತು 2 ರವರಿಗೆ ಚಿಕಿತ್ಸೆ ನೆಡಯುತ್ತಿದ್ದಾಗ 10 ನಿಮಿಷಗಳಲ್ಲಿ ಆರೋಪಿಗಳು ಕಡೆಯವರೆಲ್ಲಾ ಆರೋಪಿಗಳಿಗೆಲ್ಲಾ ಏಟಾಗಿದೆ ಎಂದು ಕರೆದುಕೊಂಡು ಬಂದರು.

8. 2015 ರಲ್ಲಿ ಚುನಾವಣೆ ನಡೆದಿದ್ದು, ಅದಕ್ಕೂ ಮೊದಲು ನಮ್ಮ ಕಡೆಯವರಿಗೂ ಒಂದು ಸೀಟು ಕೊಡಿ ಎಂದು ನಮ್ಮ ಅಣ್ಣ ಕೇಳಿದ್ದರು. ಆಗ ಆರೋಪಿಯ ಕಡೆಯವರು ನಿಮಗೆ ಒಂದು ಸೀಟು ಕೊಡಲು ಆಗುವುದಿಲ್ಲ, ನಿಮಗೆ ತಾಕತ್ತು ಇದ್ದರೇ ನೀವೆ ಗೆದ್ದುಕೊಳ್ಳಿ ಎಂದು ಹೇಳಿದ್ದರು. ನಂತರ ನಡೆದ ಚುನಾವಣೆಯ 4 ಕ್ಷೇತ್ರಗಳಲ್ಲಿ ನಾವು ಗೆದ್ದಿದ್ದೆವು. ಚುನಾವಣೆಯಲಿ ಗೆದ್ದಿದ್ದ ನಮ್ಮ ಚಿಕ್ಕಮ್ಮ ಶೋಭಾ ರವರನ್ನು ಗ್ರಾಮ ಪಂಚಾಯತಿ ಅಧ್ಯಕ್ಷರನ್ನಾಗಿ ಮಾಡಲಾಯಿತು. ಆಗಿನಿಂದ ನಮ್ಮ ಮೇಲೆ ಆರೋಪಿಗಳು ದ್ವೇಷ ಇಟ್ಟುಕೊಂಡಿದ್ದರು.

ಪಾಟೀ ಸವಾಲು : ಆರೋಪಿ ಪರವಾಗಿ :- ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಬಿ.ಜಿ.ರಮಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.